ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್
*ದೇವಸ್ಥಾನಗಳಲ್ಲಿ ಕಾಣಿಕೆ ಯಾಕೆ ಹಾಕ್ತಾರೆ? ದೇವರಿಗೇ ಲಂಚಾನಾ?*




ಅದು ಭಕ್ತನನ್ನು ಅವಲಂಬಿಸುತ್ತದೆ; ಭಯದಿಂದ ಕೊಟ್ಟರೆ ಲಂಚ, ಭಕ್ತಿಯಿಂದ ಕೊಟ್ಟರೆ ಕಾಣಿಕೆ, ಪ್ರೀತಿಯಿಂದ ಕೊಟ್ಟರೆ ಅರ್ಪಣೆ!

ಎಂ.ಎಸ್. ಸೋಮಶೇಖರ್, ಮೈಸೂರು
*ಹುತ್ತಕ್ಕೆ ಹಾಲೆರೆದರೆ ಸರ್ಪ ಹೇಗೆ ಕುಡಿಯುತ್ತದೆ?*
ಕೆಳಗೆ ಶೇಖರಣೆಯಾಗುವವರೆಗೆ ಕಾದು ಎರಡು ನಾಲಿಗೆಗಳ ಮಧ್ಯೆ ಸ್ಟ್ರಾ ಸಿಕ್ಕಿಸಿಕೊಂಡು ಹೀರುತ್ತದಂತೆ.

ಕೇಶವ ಎನ್. ಪೈ, ಕಾಸರಕೋಡ
*ಮನುಷ್ಯನಿಗೆ ಮುಖ್ಯವಾದುದು ನಿದ್ದೇನೋ, ಮುದ್ದೇನೋ?*
ಮುದ್ದೆ ಸಿಕ್ಕಿದರೆ ಸಾಕು; ನಿದ್ದೆ ತಾನಾಗಿಯೇ ಬರುತ್ತದೆ!

ಡಿ.ಕೆ. ರಾಜ್, ಗದಗ
*ಹೆಣ್ಣು ಮಕ್ಕಳಿಗೆ ಬರೀ ಒಂಬತ್ತು ತಿಂಗಳು ಹೊಟ್ಟೆಯಾದರೆ ಗಂಡುಮಕ್ಕಳಿಗೆ ಏಕೆ ಪರ್ಮನೆಂಟ್ ಹೊಟ್ಟೆ?*



ನಿರಂತರ ಥಾಲಿ–ಭಾಗ್ಯದ ಕೃಪೆ!

ಪಿ.ಜೆ.ರಾಘವೇಂದ್ರ, ಮೈಸೂರು
*ಶಾಸನ ರೂಪಿಸುವವರನ್ನು ಶಾಸಕರು ಎಂದರೆ ಶಾಸನ ಮುರಿಯುವವರನ್ನು ದುಶ್ಶಾಸನರೆನ್ನಬಹುದೆ?*
ಒಂದೇ ತೊಂದರೆ; ಅಂತಹವರೇ ಬಹಳ ಇರುವುದರಿಂದ ದುಶ್ಶಾಸನ1, ದುಶ್ಶಾಸನ2....3,....4 ಎಂದು ನಂಬರ್ ನೀಡಬೇಕಾಗುತ್ತದೆ.

ಪೇಂಟರ್ ಪಾಪು, ಸಂತೇಮರಹಳ್ಳಿ
*ಕೋಟಿಗಟ್ಟಲೆ ಹಣ ಇಟ್ಟುಕೊಂಡು ಕೆಜಿಗಟ್ಟಲೆ ಬೆಳ್ಳಿ, ಬಂಗಾರ ಕೊಳ್ಳಬಹುದು. ಆದರೆ ಒಂದು ಗ್ರಾಂ ನೆಮ್ಮದಿ ಕೊಳ್ಳಲಾಗದು. ಏಕೆ?*
ಕೊಳ್ಳಲು ಅದು ಹೊರಗೆ ದೊರೆಯುವ ಐಟಂ ಅಲ್ಲವಲ್ಲ! ವಾಸ್ತವದ ಜಲ ವಿವೇಕದ ಪಾತ್ರದಲ್ಲಿ ಸಾಗಿದರೆ ನೆಮ್ಮದಿಯ ಬುಗ್ಗೆ!

ಶುಭಾ ನೀರಜ್ ರುದ್ರೇಶ್, ಹೊಸೂರು
*ಚಿತೆ ದೊಡ್ಡದೋ, ಚಿಂತೆ ದೊಡ್ಡದೋ?*
ಅದರ ಮೇಲೆ ಮಲಗಿದವನನ್ನು ದೇವಲೋಕ(ಸ್ವರ್ಗ,ನರಕ)ದವರೆಗೆ ಕೊಂಡೊಯ್ಯುವ ಶಕ್ತಿಯಿರುವುದರಿಂದ ಚಿತೆಯೇ ದೊಡ್ಡದು!

ಎಚ್.ಆರ್. ದೇಸಾಯಿ, ರಾಯಚೂರು
*ಮನುಷ್ಯನೂ ಸಮುದ್ರದ ಪ್ರಾಣಿಯಾಗಿಯೇ ಹುಟ್ಟಿದ್ದರೆ...?*
ಹುಟ್ಟಿದಿದ್ದರೇನು, ಗುಣಗಳಿವೆಯಲ್ಲ – ಮೊಸಳೆ ಕಣ್ಣೀರು, ತಿಮಿಂಗಿಲದ ಕಬಳಿಕೆ, ಮೀನಿನಂತೆ ನುಣುಚಿಕೊಳ್ಳುವಿಕೆ, ನೀರಾನೆಯ ಮುಖ....

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಪ್ರೇಮಿಗಳು ವಿವಾಹಕ್ಕೆ ಮೊದಲು ಯುಗಳಗೀತೆ ಹಾಡುತ್ತಾರೆ, ನಂತರ ಜಗಳಗೀತೆ, ಮಗುವಾದಾಗ ಜೋಗುಳ. ಇಷ್ಟೇನಾ ಜೀವನ?*
ಸತಿ ತವರಿಗೆ ಹೋದಾಗ ವಿರಹಗೀತೆ, ಮಕ್ಕಳು ರಂಪ ಮಾಡಿದಾಗ ರಗಳೆ, ಕಡೆಯಲ್ಲಿ ತಮಿಳುಬ್ಯಾಂಡಿನ ವಿನೋದಮಯ ಶೋಕಗೀತೆ!

ವಿ. ಹೇಮಂತಕುಮಾರ್, ಬೆಂಗಳೂರು
*ನಮ್ಮನ್ನು ಮರೆತವರನ್ನು ತಾನೆ ನಾವು ಹೆಚ್ಚು ನೆನಪಿಸಿಕೊಳ್ಳುವುದು?*
ಹೌದು; ಸಾಲ ಕೊಟ್ಟಿರುತ್ತೀವಲ್ಲ!

ಸ್ನೇಹಾ, ಕತ್ತರಗುಪ್ಪ
*ಸಂಸಾರವೆಂಬ ಸರ್ಕಸ್ಸನ್ನು ನಿಯಂತ್ರಿಸಲು ಯಾವ ಯಾಗ ಕೈಗೊಳ್ಳಬೇಕು ಅಂಕಲ್?*
ಪುರುಷ ಸಿಂಹ ಸಂಚಯಿತ ಸಂಪೂರ್ಣಧನಾಕರ್ಷಣ ಯಾಗ!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಕುಡಿಯೋದು ಅಂದರೆ ಎಲ್ಲರೂ ಹೆಂಡ ಅಂತಾನೇ ಯಾಕೆ ತಿಳ್ಕೋತಾರೆ?*
'ಕುಡುಕ' ಪದದ ಮಹಾತ್ಮೆ; ಕರ್ತೃವಿನ ಕ್ರಿಯೆಯಿಂದ ಕ್ರಿಯಾಪದಕ್ಕೇ ದೋಷ!

## ಬಹುಮಾನಿತ ಪ್ರಶ್ನೆ

ರುಕ್ಮಾಂಗದ ಶಾಸ್ತ್ರಿ, ಮೈಸೂರು
*ಈಗಿನ ಹೆಣ್ಣುಮಕ್ಕಳು ಸೆರಗು ಎಂಬುದನ್ನೇ ಮರೆತಿದ್ದಾರಲ್ಲ, ನಾಚಿಕೆ ಕಡಿಮೆಯಾಗಿದೆಯೆ?*
ಪುರುಷರು ಸುಸ್ವಭಾವದವರು, ಕಾಮುಕ ದೃಷ್ಟಿಯಿಲ್ಲದ ನಾಗರಿಕರು ಎಂದು ತಿಳಿದು ಹಾಗಿರುವರಂತೆ! ತಪ್ಪಾಗಿದ್ದರೆ ಕ್ಷಮಿಸಿ!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ಯಾರೂ ಸಿಗಲಿಲ್ಲ, ನಿಮಗೇ ಸನ್ಮಾನ ಮಾಡೋಣವೆಂದಿದ್ದೇನೆ. ಯಾವುದು ಬೇಕು – ಕತ್ತೀನೋ, ಗದೇನೋ?*
ಹ್ಞ! ಕತ್ತಿಗಿಂತ ಹರಿತವಾದ ಲೇಖನಿ, ಗದೆಗಿಂತ ತೂಕವಾದ ಭಾಷೆ ನನ್ನಲ್ಲೇ ಇದೆ.

ಶಿವಕುಮಾರ್, ಶೋರಾಪೂರ
*ಪಾಲಿಗೆ ಬಂದದ್ದು ಪಂಚಾಮೃತವಂತೆ; ಪಾಲಿಗೆ ಬಾರದ್ದು?*
ತೆರಿಗೆ!

ಕೆ. ಮೈಥಿಲಿಕೃಷ್ಣ, ಬೆಂಗಳೂರು
*ರಾಜಕೀಯದಲ್ಲಿ ಶೀಘ್ರವಾಗಿ ಬೆಳೆಯಲು ಏನೇನು ಬೇಕು?*




ಸರಿಯಾದ ಸಮಯ ನೋಡಿಕೊಂಡು ಥಟನೆ ಪಕ್ಷಾಂತರ ಮಾಡಬೇಕು!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಚಪ್ಪಲಿ ಸವೆದ ಹಾಗೆ ಮನುಷ್ಯನ ಜೀವನ ಬೇಗನೆ ಸವೆದುಹೋದರೆ?*
ಕಾಲನೆಂಬ ಕೆಸರಿನಲ್ಲಿ ಎಂದೂ ಅಳಿಸಿಹೋಗದಂತಹ ಹೆಜ್ಜೆಗುರುತುಗಳನ್ನು ಮೂಡಿಸಿಬಿಡಬೇಕು.

ಎಸ್.ಜಿ. ಕರನಂದಿ, ಹುನಗುಂದ
ಒಂದೇ ನಾಲಿಗೆ ಇರುವ ನಾವು ಅನೇಕ ಸುಳ್ಳುಗಳನ್ನು ಹೇಳುತ್ತೇವೆ. ಅನೇಕ ನಾಲಿಗೆಗಳು ಇದ್ದಿದ್ದರೆ?
ವಾದಕ್ಕೊಂದು, ಸಾಕ್ಷಿಗೊಂದು ಎಂದು ಇಟ್ಟುಕೊಳ್ಳಬಹುದಾಗಿತ್ತು!

■ ರಾಮ್